## ಬುತ್ತಿ ಚಿಗುರು

### ಜಾಮೂನು ಪ್ರಸಂಗ

ಪ್ರಸನ್ನ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಹೊರಟಿದ್ದ. ಪಕ್ಕದ ಸೀಟಿನಲ್ಲಿ ಕುಳಿತ ಮಹಿಳೆಯೊಬ್ಬಳು ತನ್ನ ಮಗುವಿಗೆ ಜಾಮೂನು ತಿನ್ನಿಸಲು ಹರಸಾಹಸ ಪಡುತ್ತಿದ್ದರೂ ಮಗು ತಿನ್ನುತಿರಲಿಲ್ಲ. 'ನೋಡು ಪಾಪು ನೀ ಜಾಮೂನು ತಿನ್ನದಿದ್ರೆ ಅಂಕಲ್‌ಗೆ ತಿನ್ನಿಸ್ತಿನಿ...' ಅಂತ ಪ್ರಸನ್ನನ ಕಡೆ ತೋರಿಸ್ತಿದ್ಲು. ಬಸ್ಸು ಮೈಸೂರಿನಿಂದ ಶ್ರೀರಂಗಪಟ್ಟಣ, ಮಂಡ್ಯ ದಾಟಿ ಮದ್ದೂರಿಗೆ ಬಂತು. ಆಗಲೂ ಆಕೆ 'ನೋಡು ತಿನ್ನೋದಾದ್ರೆ ತಿನ್ನು. ಇಲ್ಲಾಂದರೆ ಅಂಕಲ್ ತಿಂದೇ ಬಿಡ್ತಾರೆ...' ಎಂದಳು. ಪ್ರಸನ್ನನಿಗೆ ಸಿಟ್ಟು ಉಕ್ಕಿಬಂತು. ಅವ ಹೇಳೇ ಬಿಟ್ಟ, 'ತಿನ್ನಿಸುದಾದ್ರೆ ತಿನ್ಸಿ ಬಿಡಿ. ಸುಮ್ ಸುಮ್ಮನೆ ಹೇಳಬೇಡಿ. ನಾ ಜಾಮೂನು ತಿನ್ನೋ ಆಸೆಯಿಂದ ಶ್ರೀರಂಗಪಟ್ಟಣದಲ್ಲಿ ಇಳಿಯಬೇಕಾದೋನು ಅಲ್ಲಿಳಿಯದೇ ಮಂಡ್ಯ ಬಿಟ್ಟು ಮದ್ದೂರಿನವರೆಗೂ ಬಂದಿದೀನಿ...' ಎಂದ.



**ಮಂಡ್ಯ ಮ.ನಾ. ಉಡುಪ**

---

### ಐದು ಕೇಜಿ ಉಡುಗೊರೆ

ದೀಪು ತನ್ನ ಅಜ್ಜಿಗೆ ಹೇಳಿದ, 'ನೋಡಜ್ಜಿ, ಅಪ್ಪ, ಅಕ್ಕನಿಗೆ 5ಜೀ ಮೊಬೈಲ್ ಗಿಫ್ಟ್ ಕೊಟ್ಟಿದ್ದಾರೆ ಮೊನ್ನೆ ಹುಟ್ಟುಹಬ್ಬಕ್ಕೆ... ಮುಂದಿನ ತಿಂಗಳು ನಿನಗೂ ಎಪ್ಪತ್ತನೇ ವರ್ಷದ ಹುಟ್ಟು ಹಬ್ಬ ಬರುತ್ತೆ. ನಿನಗೂ 5ಜೀ ಮೊಬೈಲು ಉಡುಗೊರೆಯಾಗಿ ತರ್ತಾರೇನೊ' ಎಂದ. ಅಜ್ಜಿ, 'ಅಯ್ಯೋ, ಬೇಡ ಮಗ... ನನಗೆ ಯಾಕಪ್ಪಾ ಐದು ಕೇಜೀ ಫೋನು? ಅಷ್ಟೊಂದು ಭಾರ ಎತ್ತುವ ಶಕ್ತಿ ಈಗ ನನಗೂ ಇಲ್ಲ. ಅದೆಲ್ಲಾ ಬೇಡಾ ಅಂತ ನೀನೇ ಹೇಳು ಮರೀ ಅಪ್ಪಂಗೆ...' ಅಂದರು. ದೀಪು ತಲೆ ಮೇಲೆ ಕೈ ಹೊತ್ತು ಕುಳಿತ.

**ಸುಮನಾ**

